**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ನಾಗಮಂಗಲ.**

**ಅಸಲು ದಾವಾ ಸಂಖ್ಯೆ. 322/2015**

**ವಾ.ಸಾ-2**

**ಸಾಕ್ಷಿಗೆ ದಿನಾಂಕಃ 09-04-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ.ಎಲ್.ಎಸ್.ಎಸ್ ಪ್ರತಿವಾದಿಯರ ಪರ ವಕೀಲರಿಂದಃ**

1. ನನ್ನ ತಮ್ಮನಾದ ವಾ.ಸಾ 1 ರವರ ಸಾಕ್ಷ್ಯವನ್ನು ಮುಂದುವರೆಸಲು ನನಗೆ ಯಾವುದೇ ತಕರಾರು ಇಲ್ಲ. ನಾನು ಮತ್ತು ಪ್ರತಿವಾದಿಯವರು ಒಂದೇ ಊರಿನವರು ಎಂದರೆ ಸರಿ. 4 ನೇ ಪ್ರತಿವಾದಿಗೆ ದಾವಾ ಸ್ವತ್ತು ಹೇಗೆ ಬಂತು ಎಂದು ನಾನು ದಾಖಲಾತಿಗಳನ್ನು ಪರಿಶೀಲಿಸಿದ್ದೇನೆ. ಈ ಕುರಿತು ಯಾವ ದಾಖಲಾತಿಗಳನ್ನು ಪರಿಶೀಲಿಸಿದ್ದೇನೆ ಎಂದು ನನಗೆ ಗೊತ್ತಿಲ್ಲ.

2. ದಾವಾ ಸ್ವತ್ತು ಮೂಲತಹ ನಿಂಗಮ್ಮ ಎಂಬುವವರಿಗೆ ಸೇರಿತ್ತು. ಸದರಿ ನಿಂಗಮ್ಮರವರಿಗೆ ದಾವಾ ಸ್ವತ್ತು ಸರ್ಕಾರದಿಂದ ಮಂಜೂರಾಗಿತ್ತು. ಸದರಿ ಮಂಜೂರಾಗಿರುವ ದಾಖಲಾತಿಗಳನ್ನು ನಾನು ನೊಡಿದ್ದೇನೆ. ಸದರಿ ನಿಂಗಮ್ಮನವರಿಗೆ ಒಟ್ಟು 2 ವರೆ ಎಕರೆ ಜಮೀನು ಮಂಜೂರಾಗಿತ್ತು.

3. 1 ನೇ ಪ್ರತಿವಾದಿಯ ತಂದೆಗೆ ಒಟ್ಟು 4 ಜನ ಮಕ್ಕಳು. ಸದರಿಯವರು 1 ರಿಂದ 3 ನೇ ಪ್ರತಿವಾದಿ ಮತ್ತು 4 ನೇ ಪ್ರತಿವಾದಿಯ ಗಂಡ. 4 ನೇ ಪ್ರತಿವಾದಿಯ ಗಂಡನಿಗೆ ದಾವಾ ಆಸ್ತಿಯನ್ನು ಕೃಷ್ಣಪ್ಪ ಮತ್ತು ನಿಂಗಮ್ಮ ಎಂಬುವವರು ವಿಭಾಗದಲ್ಲಿ ಕೊಟ್ಟಿದ್ದರು. 1 ರಿಂದ 3 ನೇ ಪ್ರತಿವಾದಿಯರು ಯಾವಾಗ ವಿಭಾಗ ಮಾಡಿಕೊಂಡಿದ್ದಾರೆ ಎಂದು ನಾನು ದಾಖಲಾತಿಗಳನ್ನು ನೋಡಿಲ್ಲ.

4. ನಿಪಿ 2 ರಲ್ಲಿ ದಾವಾ ಸ್ವತ್ತನ್ನು ಮಾರಾಟ ಮಾಡಲು ಹೇಗೆ ಹಕ್ಕು ಬಂತು ಎಂದು ನಮೂದಿಸಿಲ್ಲ. ದಾವಾ ಸ್ವತ್ತನ್ನು ಮಾರಾಟ ಮಾಡಲು ಯಾರೆಲ್ಲಾ ಸೇರಿದ್ದರು ಎಂದು ನನಗೆ ಗೊತ್ತಿಲ್ಲ. ಈ ಕುರಿತು ನನ್ನ ತಂದೆ ನನಗೆ ಹೇಳಿರಲಿಲ್ಲ. 4 ನೇ ಪ್ರತಿವಾದಿಯ ಗಂಡನ ತಾತನ ಹೆಸರು ಕೂಡ ಹೊನ್ನೇಗೌಡ ಎಂದರೆ ನನಗೆ ಗೊತ್ತಿಲ್ಲ. ಸದರಿ ತಾತನಾದ ಹೊನ್ನೇಗೌಡನಿಗೆ ಕೃಷ್ಣೇಗೌಡ ಎಂಬ ಒಬ್ಬನೇ ಮಗ ಎಂದರೆ ಸರಿ. ಸದರಿ ಕೃಷ್ಣೇಗೌಡನಿಗೆ 2 ಜನ ಹೆಂಡತಿಯವರು ಎಂದರೆ ಸರಿ. ಸದರಿಯವರ ಪೈಕಿ ಮೊದಲನೇಯವರು ನಿಂಗಮ್ಮ ಮತ್ತು ಎರಡನೇಯವರು ಕೆಂಪಮ್ಮ ಎಂದರೆ ಸರಿ.

5. ಸದರಿಯವರ ಪೈಕಿ ಮೊದಲನೇ ಹೆಂಡತಿಗೆ ಹೊನ್ನೇಗೌಡ, ಪ್ರಕಾಶ, ವರಲಕ್ಷ್ಮಿ,ಇಂದಿರಾ, ನಾಗೇಶ್, ರವಿಕುಮಾರ್, ಲತಾ ಮತ್ತು ವನಮಾಲ ಎಂದು 8 ಜನ ಮಕ್ಕಳು ಎಂದರೆ ಸರಿ. 2 ನೇ ಹೆಂಡತಿಗೆ ಗೀತಾ ಎಂಬ ಒಬ್ಬಳೇ ಮಗಳು ಎಂದರೆ ಸರಿ. ದಾವಾ ಸ್ವತ್ತನ್ನು ಮಾರಾಟ ಮಾಡಿದ 4 ನೇ ಪ್ರತಿವಾದಿಯ ಗಂಡನಿಗೆ ಹೊನ್ನೇಗೌಡ ಮತ್ತು ಜಯಣ್ಣ ಎಂಬ ಎರಡು ಹೆಸರುಗಳಿಗೆ ಎಂದರೆ ಸರಿ.

6. ದಾವಾ ಸ್ವತ್ತನ್ನು ನಿಂಗಮ್ಮರವರು ಸ್ತ್ರೀಧನ ಹಣದಿಂದ ಸರ್ಕಾರಕ್ಕೆ ಕಿಮ್ಮತ್ತು ಹಣ ಪಾವತಿಸಿ ಮಂಜೂರು ಮಾಡಿಸಿಕೊಂಡಿರುವ ಸ್ವತ್ತು ಎಂದರೆ ಸರಿಯಲ್ಲ. ಸರ್ವೆ ನಂಬರ್ 2 ಎಕರೆ 30 ಗುಂಟೆ ಜಮೀನು ನಿಂಗಮ್ಮರವರಿಗೆ ವೈಯುಕ್ತಿಕವಾಗಿ ಮಂಜೂರಾಗಿದೆ ಎಂದರೆ ಸರಿಯಲ್ಲ. ಸದರಿ ನಿಂಗಮ್ಮರವರಿಗೆ ಮಂಜೂರಾತಿಯ ಆದಾರದ ಮೇಲೆ ಖಾತೆಯು ಕೂಡ ಬದಲಾವಣೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ.

ಅಸಲು ದಾವಾ ಸಂಖ್ಯೆ. 322/2015
ವಾ.ಸಾ-2

ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಾಯಾವಕಾಶ ಕೋರಿದ್ದರಿಂದ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ, ನಾಗಮಂಗಲ.